# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 126

ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದ್ದವರು)

ಉತ್ತರಿಸಬೇಕಾದ ದಿನಾಂಕ : 09.12.2024

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಟ್ಟು ಮತ್ತು ಮುಟ್ಟಿನ ಶುಚಿತ್ವದ ಮಾಹಿತಿಯ ಕೊರತೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಈ ಬಗ್ಗೆ ಅರಿವು ಮೂಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು: (ಪೂರ್ಣಮಾಹಿತಿ ನೀಡುವುದು) | ಬಂದಿದೆ.<br>ಈ ಬಗ್ಗೆ ಅರಿವು ಮೂಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ಜಾರಿಗೊಳಿಸಲು ಋತು ಶುಚಿತ್ವ ಯೋಜನೆಯನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ ಮತ್ತು ಈ ಯೋಜನೆಯ ಧ್ಯೇಯೋದ್ದೇಶಗಳೇನು: ಹಾಗೂ ಯೋಜನೆ ಅನುಷ್ಠಾನದಲ್ಲಿ ಕೇಂದ್ರ ರಾಜ್ಯಸರ್ಕಾರಗಳ ಜವಾಬ್ದಾರಿ ಮತ್ತು ಪಾತ್ರಗಳೇನು: ಹಾಗೂ ಕಳೆದ 5 ವರ್ಷಗಳಲ್ಲಿ ಕೇಂದ್ರದಿಂದ ಈ ಯೋಜನೆಯಡಿ ರಾಜ್ಯಸರ್ಕಾರಕ್ಕೆ ದೊರೆತಿರುವ ನೆರವು ಎಷ್ಟು: (ಪೂರ್ಣಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ (ಆರ್.ಕೆ.ಎಸ್.ಕೆ) ದಡಿ ಉಪಚಟುವಟಿಕೆಯಾದ **Menstrual Hygiene Scheme** ಚಟುವಟಿಕೆ ನಡೆಸಲಾಗುತ್ತಿದೆ. ಇದರಡಿ ಹದಿಹರೆಯದ ಹೆಣ್ಣುಮಕ್ಕಳಿಗೆ (ಫಲಾನುಭವಿಗಳಿಗೆ) ಕಡಿಮೆ ಬೆಲೆಯಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ವಿತರಿಸಲಾಗುತ್ತಿದೆ.<br><br>ಆದರೆ ಕರ್ನಾಟಕ ರಾಜ್ಯ ಸರ್ಕಾರದ ಶುಚಿ-ಯೋಜನೆಯಡಿ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಸಂಪೂರ್ಣ ಉಚಿತ ಸರಬರಾಜು ಮಾಡುತ್ತಿರುವ ಹಿನ್ನಲೆಯಲ್ಲಿ, ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ಜಾರಿಗೊಳಿಸುತ್ತಿರುವ ಋತು ಶುಚಿತ್ವ ಯೋಜನೆಯನ್ನು ಅಳವಡಿಸಿಕೊಂಡಿರುವುದಿಲ್ಲ.<br><br>ಕಳೆದ 5 ವರ್ಷಗಳಲ್ಲಿ ಆರ್ಥಿಕ ವರ್ಷ 2022-23ನೇ ಸಾಲಿಗೆ ರೂ.20.10ಲಕ್ಷಗಳನ್ನು Menstrual Hygiene Scheme ರ ಕುರಿತಾದ ಅಧ್ಯಯನ ನಡೆಸಲು NHM-Rashtriya Kishora Swasthya Karyakrama (RKSK) ಕಾರ್ಯಕ್ರಮದಡಿ ಅನುದಾನ ಪೂರೈಕೆ ಮಾಡಲಾಗಿರುತ್ತದೆ. |

| | | |
|---|---|---|
| ಇ) | ರಾಜ್ಯದಲ್ಲಿ ಋತುಶುಚಿತ್ವ ಯೋಜನೆಗೆ ಕಳೆದ **3** ವರ್ಷಗಳಿಂದ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಯಾಗದೇ ಗ್ರಾಮೀಣ ಭಾಗದ ಹದಿಹರೆಯದ ಯುವತಿ ಮತ್ತು ಮಹಿಳೆಯರು ತಮ್ಮ ಶುಚಿತ್ವ ಕಾಪಾಡಿಕೊಳ್ಳಲು ಬಟ್ಟೆಯನ್ನು ಉಪಯೋಗಿಸುತ್ತಿದ್ದು ಇದರಿಂದ ಚರ್ಮರೋಗ**,** ಮೂತ್ರರೋಗ ಮತ್ತಿತರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು (ಪೂರ್ಣ ಮಾಹಿತಿ ನೀಡುವುದು) | ಗ್ರಾಮೀಣ ಭಾಗದ ಹದಿಹರೆಯದ ಯುವತಿಯರು ತಮ್ಮ ಶುಚಿತ್ವ ಕಾಪಾಡಿಕೊಳ್ಳಲು ಬಟ್ಟೆಯನ್ನು ಉಪಯೋಗಿಸುತ್ತಿದ್ದು, ಇದರಿಂದ ಚರ್ಮರೋಗ, ಮೂತ್ರ ರೋಗ ಮತ್ತಿತರೆ ಆರೋಗ್ಯ ಸಮಸ್ಯೆಗಳು ಉಂಟಾಗಿರುವ ಕುರಿತಾಗಿ ಆರೋಗ್ಯ ಕೇಂದ್ರಗಳಲ್ಲಿ(ಆಸ್ಪತ್ರೆಗಳಲ್ಲಿ) ವರದಿಯಾಗಿರುವುದಿಲ್ಲ. |
| ಈ) | ರಾಜ್ಯದಲ್ಲಿ ಹದಿಹರೆಯದ ಹೆಣ್ಣು ಮಕ್ಕಳು ಹಾಗೂ ಮಹಿಳಾ ಶಿಕ್ಷಕರು ಮತ್ತು ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರು ಋತು ಚಕ್ರ ಸಮಯದಲ್ಲಿ ಕ್ರಮವಾಗಿ ಶಾಲಾ- ಕಾಲೇಜು ಮತ್ತು ಸರ್ಕಾರಿ ಕಛೇರಿಗಳಿಗೆ ಗೈರುಹಾಜರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗೂ ಈ ಬಗ್ಗೆ ಸರ್ಕಾರ ಅಧ್ಯಯನ ಕೈಗೊಂಡಿದೆಯೇ: (ಪೂರ್ಣ ವಿವರಗಳನ್ನುನೀಡುವುದು) | ಗಮನಕ್ಕೆ ಬಂದಿರುವುದಿಲ್ಲ. |
| ಉ) | ರಾಜ್ಯದಲ್ಲಿನ ಮಹಿಳಾ ಸರ್ಕಾರಿ ನೌಕರರು ಋತು ಚಕ್ರದ ಸಮಯದಲ್ಲಿ ಕಛೇರಿಗೆ ಗೈರುಹಾಜರಾಗುವ ಸಮಯದಲ್ಲಿ ವಿಶೇಷ ರಜೆ ನೀಡಲು ಸರ್ಕಾರ ತೀರ್ಮಾನಿಸಿದೆಯೇ**?** **(**ಪೂರ್ಣಮಾಹಿತಿನೀಡುವುದು) | ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. |


ಸಂಖ್ಯೆ: ಆಕುಕ 68 ಎಸ್.ಟಿ.ಕ್ಯೂ 2024

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# <u>ಅನುಬಂಧ-1</u>

ಮುಟ್ಟಿನ ಶುಚಿತ್ವ ಕುರಿತಂತೆ ಸಮುದಾಯದಲ್ಲಿ ಹಾಗೂ ವಿಶೇಷವಾಗಿ ಶಾಲಾ-ಕಾಲೇಜುಗಳಲ್ಲಿನ ಮಕ್ಕಳಿಗೆ ಮಾಹಿತಿ ನೀಡುವ ಹಾಗೂ ಅರಿವು ಮೂಡಿಸುವ ಹಲವಾರು ಚಟುವಟಿಕೆಗಳನ್ನು ಆರೋಗ್ಯ ಇಲಾಖೆಯು ಕೈಗೊಂಡಿರುತ್ತದೆ. ಮುಖ್ಯವಾಗಿ ವಿಷಯ ಕುರಿತಾದ ಕಿರುಚಿತ್ರಗಳು, ಕೈಪಿಡಿಗಳು ಹಾಗೂ ಸಮುದಾಯ ಆಧಾರಿತ ಶಿಕ್ಷಣ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.
ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ಶುಚಿ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿ ಈ ಕೆಳಗಿನವುಗಳಂತೆ ವಿವಿಧ ಕ್ರಮಗಳನ್ನು ವಹಿಸಲಾಗಿರುತ್ತದೆ.

- ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿ ಆಪ್ತ ಸಮಾಲೋಚಕರುಗಳು ಸ್ನೇಹಾ ಕ್ಲಿನಿಕ್ ಗಳಿಗೆ ಭೇಟಿ ನೀಡುವ ಎಲ್ಲಾ ಹದಿಹರೆಯದ ಮಕ್ಕಳಿಗೆ ಋತುಚಕ್ರ, ಮುಟ್ಟಿನ ವೈಜ್ಞಾನಿಕ ನಿರ್ವಹಣೆ ಕುರಿತು ಮಾಹಿತಿ ನೀಡುತ್ತಾರೆ ಹಾಗೂ "ಹದಿಹರೆಯದವರ ಆರೋಗ್ಯ ದಿನಾಚರಣೆ" ಕಾರ್ಯಕ್ರಮಗಳಲ್ಲಿ ಶುಚಿ ಕಾರ್ಯಕ್ರಮದ ಮಾಹಿತಿ ಹಾಗೂ ಸಮುದಾಯದಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುತ್ತಾರೆ.





- ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುತ್ತಿರುವ ಆರ್.ಬಿ.ಎಸ್.ಕೆ ಮೊಬೈಲ್ ಹೆಲ್ತ್ (ವೈದ್ಯರ) ತಂಡಗಳು ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಆರೋಗ್ಯ ತಪಾಸಣೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಆರೋಗ್ಯ ಅಧಿವೇಶನ ಚಟುವಟಿಕೆಯನ್ವಯ ಇತರೆ ಆರೋಗ್ಯ ಮಾಹಿತಿಯೊಂದಿಗೆ ಮುಟ್ಟಿನ ನಿರ್ವಹಣೆ, ಶುಚಿ ಕಾರ್ಯಕ್ರಮ ಹಾಗೂ ಬಳಸಿದ ಪ್ಯಾಡ್‌ನ ಸೂಕ್ತ ವಿಲೇವಾರಿ ಕುರಿತು ಸ್ಪಷ್ಟ ಜ್ಞಾನ ಹಾಗೂ ಜಾಗೃತಿಯನ್ನು ಮೂಡಿಸುತ್ತಾರೆ.

ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದಡಿ ಶುಚಿ ಕಾರ್ಯಕ್ರಮದ ಬಿತ್ತಿಪತ್ರ (ಐ.ಇ.ಸಿ ಪೋಸ್ಟರ್) ಅನ್ನು ವಿನ್ಯಾಸಗೊಳಿಸಲಾಗಿ ಶಾಲಾ-ಕಾಲೇಜು, ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಮುಖಾಂತರ Digital Wall Painting ಮಾಡಿಸಲಾಗಿ ಮಕ್ಕಳಿಗೆ ಶುಚಿ ಕಾರ್ಯಕ್ರಮ ಕುರಿತ ಕಿರು ಮಾಹಿತಿ ಹಾಗೂ ಬಳಸಿದ ಪ್ಯಾಡ್ ನ ಸೂಕ್ತ ವಿಲೇವಾರಿ ಕುರಿತು ಸ್ಪಷ್ಟ ಮಾಹಿತಿಯನ್ನು ಚಿತ್ರದೊಂದಿಗೆ ತಿಳಿಸಲಾಗಿದೆ . ಕಾರ್ಯಕ್ರಮದಡಿ 2024-25ನೇ ಸಾಲಿಗೆ ವಿಶೇಷವಾಗಿ ಕಿಶೋರಿಯರಿಗಾಗಿ ಮುಟ್ಟಿನ ನೈರ್ಮಲ್ಯದ ಮಾಹಿತಿ ಕೈಪಿಡಿಯನ್ನು ಮುದ್ರಿಸಲಾಗಿದ್ದು, ಸದರಿ ಕೈಪಿಡಿಗಳನ್ನು ಕಾರ್ಯಕ್ರಮದಡಿ ಕಾರ್ಯನಿರತ ಸ್ನೇಹಾ ಕ್ಲಿನಿಕ್ (ಆರೋಗ್ಯ ಕೇಂದ್ರ) ಗಳಿಗೆ ಭೇಟಿ ನೀಡುವ ಕಿಶೋರಿಯರಿಗೆ ಉಚಿತವಾಗಿ ನೀಡಲಾಗುತ್ತಿದೆ.



File No. HFW/68/STQ/2024-FW-HEALTH AND FAMILY WELFARE SEC (Computer No. 1596168)
Generated from eOffice by DEEPA T S, HFW-FW-ASST2(DTS), ASSISTANT, HEALTH AND FAMILY WELFARE SEC on 17/02/2025 06:17 PM




-2-

## ವಿಲೇವಾರಿ ಮಾಹಿತಿ ಚಟುವಟಿಕೆ

ಬಳಕೆಯಾದ ನಂತರ ಸ್ಯಾನಿಟರಿ ನ್ಯಾಪ್‌ಕಿನ್ ಪ್ಯಾಡ್‌ಗಳನ್ನು ಕಾಗದದಲ್ಲಿ ಸುತ್ತಿ ಸಾಮಾನ್ಯ ಒಣ ತ್ಯಾಜ್ಯದ ಮುಖಾಂತರ ಅಥವಾ ನೆಲದಲ್ಲಿ ಹೂಳುವ ಮುಖಾಂತರ ಸುರಕ್ಷಿತವಾಗಿ ವಿಲೇವಾರಿ ಮಾಡುವುದು. ಸದರಿ ವಿಲೇವಾರಿಯ ಕುರಿತಂತೆ ಮಕ್ಕಳಲ್ಲಿ ಮಾಹಿತಿ ಹಾಗೂ ಜಾಗೃತಿ ಮೂಡಿಸಲು ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

ವಿತರಿಸಲಾಗುತ್ತಿರುವ ಶುಚಿ ಪ್ಯಾಡ್‌ನ ಪೊಟ್ಟಣದ ಮೇಲೆ ವಿಲೇವಾರಿಯ ಕುರಿತು ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ಚಿತ್ರದೊಂದಿಗೆ ತಿಳಿಸಲಾಗಿದೆ.

